Business of the House

Sri H. SIDDAVEERAPPA.—If this is the way the meeting is to be conducted, in the afternoon you will have to face a stormy weather.

Mr. SPEAKER.—What is the point ?

Sri H. SIDDAVEERAPPA.—I want to say that you have been trying to ride rough-shod on the members. When the clarification would have been over in one minute, why this farce ? You have not been going in the proper line. I am very sorry. It is rediculous. The members of this House are treated like school-boys ! When Sri Hutchmasthy Gowda wanted a clarification, you have put the demand to the vote of the House.

Mr. SPEAKER.—Hon. Members persuaded me to fix this morning session for 3 hours and I did it.

Sri H. SIDDAVEERAPPA.—But you have not got even the human touch to allow two minutes for a clarification.

Mr. SPEAKER.—Hon. member was not present here. Clarifications were allowed for 15 minutes and they were answered. The hon. member should have taken care to see what has happened.

Sri H. SIDDAVEERAPPA.—I had gone for voting business. If we are to meet again in the afternoon in this atmosphere, you better put the next Demand also to the vote of the House now alone without discussion.

Sri K. PUTTASWAMY (Minister for Law, Labour and Parliamentary Affairs).—Sir, when we meet in the afternoon, I am sure the atmosphere will be good. So, you may please adjourn the House now.

Sri H. SIDDAVEERAPPA.—This is a farce.

ಶ್ರೀಮತಿ ಕೆ. ಎಸ್ ನಾಗರತ್ನಮ್ಮ.—ಓಟ್ ಆನ್ ಅಕೌಂಟ್ ತೆಗೆದುಕೊಂಡು ವಿಷಯಗಳನ್ನು ಹೇಳುವುದಕ್ಕೆ ಕಾಲಾವಕಾಶ ಕೊಡಿ ಎಂದರೆ ಅದಕ್ಕೆ ತಾವು ಒಪ್ಪುವುದಿಲ್ಲ. ಕೋಟ್ಯಾಂತರ ರೂಪಾಯಿ ವ್ಯವಹಾರ ಮಾಡುವಾಗ ನಾವು ಮಾತನಾಡುವುದಕ್ಕಿಂತ ಮುಂಚೆ ಸ್ಪೀಕರ್ ನಾಪೇಕ್ಷರಾದ ತಾವೇ ಖಾಸ್ತಿ ಮಾತನಾಡಿ ತಮಗೆ ಮಾತನಾಡಬೇಡಿ ಎಂದು ಕೂಡಿಸುತ್ತಾ ಇದ್ದೀರಿ. ಏನು ಮಾತನಾಡಬೇಕು ಎಂಬುದನ್ನು ನಮಗೆ ಬಿಡಿ, ಅದನ್ನು ಬಿಟ್ಟು 40 ನಿಮಿಷ ತೆಗೆದುಕೊಳ್ಳಿ, 20 ನಿಮಿಷ ತೆಗೆದುಕೊಳ್ಳಿ ಅಂತ ಹೇಳಿದರೆ ನಾವೇನು ಇಲ್ಲಿ ಆಟಆಡುವುದಕ್ಕೆ ಬರುತ್ತೇವೆಯೇ ? ಎಷ್ಟು ಸೀಟುಗಳನ್ನು ಮಿನಿಸ್ಟರುಗಳು ಹಂಚಿಕೊಂಡಿದ್ದಾರೆ ಎಂದು ಕೇಳಿದ್ದಕ್ಕೆ ಹಂಚಿಕೊಂಡಿಲ್ಲ ಎಂದು ಹೇಳಿದರು, ನನ್ನ ಹತ್ತಿರ ಅಂಕಿಅಂಶ ಇದೆ. ದಾವಣಗೆರೆಯಲ್ಲಿ ಟೀಫ್‌ಮಿನಿಸ್ಟರಿಗೆ 4 ಸೀಟು ಇದೆ, ಇವೇ ರೀತಿ ಇನ್ನೂ ಅನೇಕ ಮಿನಿಸ್ಟರುಗಳ ಪಟ್ಟಿ ನನ್ನ ಹತ್ತಿರ ಇದೆ ಇದನ್ನು ಕೇಳುವುದಕ್ಕೆ ತಾವು ನನಗೆ ಅವಕಾಶ ಕೊಡಬೇಕು. ಹೆವ್ಟ್ ಮಿನಿಸ್ಟರಿಗೆ 5 ಸೀಟು, ಇಂಡಸ್ಟ್ರೀಸ್ ಮಿನಿಸ್ಟರಿಗೆ 1 ಸೀಟು, ಈ ರೀತಿ ಎರ್ಲಾ ಇದೆ.

Mr. SPEAKER.—The House will now rise to meet again at 1-30 P.M.

The House rose for Lunch at Twelve of the Clock and re-assembled at Thirty-five Minutes past One of the Clock.

(MR. SPEAKER in the Chair)

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಇಂದು ಬೆಳಿಗ್ಗೆ ಬೇಡಿಕೆಗಳ ಚರ್ಚೆಯಾಗಿ ಒಟ್ಟಿಗೆ ಹಾಕುವ ಸಂದರ್ಭದಲ್ಲಿ ಸಿದ್ಧವೀರಪ್ಪನವರು ಸ್ವಲ್ಪ ಕ್ಲಾರಿಫಿಕೇಷನ್ನಿಗೆ ಅವಕಾಶ ಕೊಡದೆ ಹೋಗುವುದು ಸರಿಯಲ್ಲ ಎಂದು ಆಕ್ಷೇಪಣೆ ಎತ್ತಿದರು. ಆ ಸಮಯದಲ್ಲಿ ಮತ್ತೆ ಕ್ಲಾರಿಫಿಕೇಷನ್ನಿಗೆ ಅವಕಾಶ ಕೊಡುವುದಾಗಿ ನೂಚನೆ ಕೊಟ್ಟಹಾಗೆ ಭಾಸವಾಯ್ತು. ಆಷ್ಟುವೇಳೆಗೆ ಗೋಪಾಲಗೌಡರು ತಮ್ಮ ಹತ್ತಿರ ಬಂದಾಗ ಸಭೆಯನ್ನು ಮುಂದಕ್ಕೆ ಹಾಕಿರುವುದು ಗೊತ್ತಾಯಿತು. ಆದುದರಿಂದ ಈಗ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶವಿದೆಯೇ ಹೇಗೆ ?

MR. SPEAKER.—The hon. Members are aware that the Hon. Minister for Health concluded his reply at about 11-35 A.M. or so. After that, some members wanted to ask clarifications and about fifteen members were permitted. The Hon. Minister replied to the clarifications raised by the hon. members. Thereafter the Demands was put to vote and the motion was adopted.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಗ ಕ್ಲಾರಿಫಿಕೇಷನ್ ಕೇಳುವುದಕ್ಕೆ ನಾವೆಲ್ಲರೂ ಎದ್ದೆವು.

MR. SPEAKER.—Now since the demands were passed, it is not possible to permit any hon. members to seek clarifications at this stage.

ಶ್ರೀ ಜಿ. ದುರ್ಗಪ್ಪ.—ತಾವು ಬೇಡಿಕೆಗಳ ಪರವಾಗಿ ಯಾರಿವ್ವೀರಿ ಮತ್ತು ವಿರೋಧವಾಗಿ ಯಾರಿವ್ವೀರಿ ಎಂದು ಕೇಳಲಿಲ್ಲ, ಯಾರೂ ಹೇಳಲೂ ಇಲ್ಲ.

MR. SPEAKER.—I have a copy of the proceedings. If any hon. Member wants to look into it I shall pass it on. The motion was put to vote and the voices of Ayes and Nays were recorded and then the motion was declared to have been adopted by the House.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು, ದುರ್ಗಪ್ಪ, ನಾಗರತ್ನಮ್ಮ, ಪ್ರಭಾಕರ್, ಮುಂತಾದವರೆಲ್ಲರೂ ಕ್ಲಾರಿಫಿಕೇಷನ್ ಕೇಳಲು ಎದ್ದೆವು, ಆದರೆ ಅಷ್ಟು ಹೊತ್ತಿಗೆ ತಾವು ಉತ್ತರ ಕೊಡಲು ಮಂತ್ರಿಗಳಿಗೆ ಅವಕಾಶ ಕೊಟ್ಟಿರಿ. ಇದರಿಂದ ನನ್ನ ಮನಸ್ಸಿನಲ್ಲೇನೊ ಭಾವನೆ ಬಂದಿದೆ ಎಂಬುದನ್ನು ಹೇಳುತ್ತೇನೆ. ತಾವು ಮೊದಲೇ ತೀರ್ಮಾನಮಾಡಿಕೊಂಡು ಇಲ್ಲಿಗೆ ಬರುತ್ತೀರೋ ಎಂಬ ಭಯ, ಅನುಮಾನ ನಮಗೆ ಈಗ ಬರುತ್ತಿದೆ. ನಮಗೆ ಯಾವಾಗಲೂ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡಬೇಕು.

MR. SPEAKER.—Several hon. Members were permitted to seek clarifications and they were also replied by the concerned Minister. Even two to three members from the Congress-R party sought clarifications and they were also replied.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕ್ಲಾರಿಫಿಕೇಷನ್ಸ್ ಕೇಳುವಾಗ ತಾವು ಮಧ್ಯೆ ಬಾಯಿ ಹಾಕುವುದರಿಂದ ನಾವು ಕೇಳುವುದು ಸಭೆಗೆ ಕೇಳಿಸುತ್ತದೆಯೋ ಇಲ್ಲವೋ ಎನ್ನುವ ಸ್ಥಿತಿ ಯಾಗುತ್ತದೆ. ನಮ್ಮ ಅನುಭವ ಆ ರೀತಿಯಾಗಿದೆ. ನಮಗೆ ಸಭೆಯಲ್ಲಿ ಮಾತನಾಡುವುದಕ್ಕೆ ಅವ ಕಾಶವೂ ಸಾಕಷ್ಟು ಸಿಕ್ಕುವುದಿಲ್ಲ. ಇದೆಲ್ಲ ಉದ್ದೇಶಪೂರ್ವಕವಾಗಿ ನಡೆಯುತ್ತಿದೆಯೋ ಏನೋ ಎನ್ನುವ ಸ್ಥಿತಿಯಾಗಿದೆ. ಅದಕ್ಕೆ ನಾವು ಏನು ಎಲ್ಲ ಹೇಳಿಕೊಳ್ಳಬೇಕು ? ಈ ಸಭೆಯ ಘನತೆಯೇ ಹೇಳ ಬೇಕು. ತಾವು ಇದನ್ನು ದಯವಿಟ್ಟು ರಿಯಲೈಸ್ ಮಾಡಬೇಕು ಮತ್ತು ಆ ರೀತಿ ಮಾಡಬೇಡಿ ಎಂದು ತಮಗೆ ಒತ್ತಾಯ ಮಾಡಬೇಕಾಗುತ್ತದೆ. ನಾವು ಬೇರೆ ಇನ್ನೆಲ್ಲಿಯೂ ಹೇಳುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಇಂಥ ಸಂದರ್ಭಗಳು ಬಂದಾಗಲೆಲ್ಲ, ಆಯಾ ಸಂದರ್ಭ ಮತ್ತು ಪರಿಸ್ಥಿತಿಯ ಯೋಗ್ಯತೆ ಮೇರೆ ತೀರ್ಮಾನ ತೆಗೆದುಕೊಳ್ಳಬೇಕೇ ಹೊರತು ಮೊದಲೇ ಒಂದು ತೀರ್ಮಾನಕ್ಕೆ ಬಂದು ಇಲ್ಲಗೆ ಬರುತ್ತೀರಿ ಎನ್ನುವ ಭಾವನೆಯುಂಟಾಗುವುದಕ್ಕೆ ಅವಕಾಶ ಬರುವ ರೀತಿಯಲ್ಲಿ

ಮಾಡಬಾರದು. ನಮಗೆ ಸಮಾನವಾದ ಅವಕಾಶವನ್ನು ಕಲ್ಪಿಸಿಕೊಡಬೇಕು. ನಾವು ಕೇಳುವಾಗ ತಾವು ಸಾವಧಾನದಿಂದ ಕೇಳಿ ಅದಕ್ಕೆ ನಾವು ಉತ್ತರವನ್ನು ಪಡೆಯುವುದಕ್ಕೆ ಅವಕಾಶ ಕೊಡ ಬೇಕೇ ಹೊರತು ಮಧ್ಯೆ ಅಡ್ಡಿ ಮಾಡಿದರೆ ನಾವು ಮಾಡಬೇಕಾಗಿರುವ ಸಭೆಯ ಕೆಲಸವನ್ನು ಯಶಸ್ವಿ ಯಾಗಿ ಮಾಡುವುದಕ್ಕಾಗುವುದಿಲ್ಲ. ಅದನ್ನು ರಿಯಲೈಸ್ ಮಾಡಬೇಕು ಎಂದು ಮನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀ ಹುಚ್ಚಮಾಸ್ತಿಗೌಡರು ಹೇಳಿದ್ದರಲ್ಲಿ ಬಹಳ ಸತ್ಯವಿದೆ. ಅವರು ಹೇಳಿದ್ದು ಉತ್ಪ್ರೇಕ್ಷೆಯಿಂದ ಕೂಡಿಲ್ಲ. ಇತ್ತೀಚೆಗೆ, ಬರುತ್ತ ಬರುತ್ತ ಈ ಸಭೆಯಲ್ಲಿ ನಮಗೆ ಕಾರ್ಯಕಲಾಪಗಳಲ್ಲಿ ಒಂದು ರೀತಿಯಿಂದ ಜಿಗುಪ್ಸೆಯಾಗಿದೆಯೆಂದು ಹೇಳಿದರೂ ತಪ್ಪಾಗಲಾರದು ? ಇಲ್ಲಿ ನಡೆಯುತ್ತಿರುತಕ್ಕ ನಡವಳಿಕೆಯಿಂದ ಯಾವ ಸೇವೆಯನ್ನು ಅಥವಾ ನಾವು ನಮ್ಮ ಕರ್ತವ್ಯವನ್ನು ಮಾಡಿದ ಹಾಗೆ ಆಗುವುದಿಲ್ಲ ಎನ್ನುತಕ್ಕದ್ದು ನಮಗೆ ಮನವರಿಕೆಯಾಗಿದೆ. ಇದಕ್ಕೆಲ್ಲ ಮೂಲ ಕಾರಣ ಮೊದಲು ಏನು ಕಾರ್ಯಕ್ರಮ ಬೇಕಾ ಪಟ್ಟಿಯನ್ನು ಮುಗಿಸಿದೆವು ಅದರಲ್ಲಿ ಕೊನೆಗೆ ಬರುತ್ತಿದ್ದೇವೆ. ಈಗಾಗಲೇ ಅರ್ಧ ಮುಕ್ಕಾಲು ವಿಷಯಗಳನ್ನು ಪೂರೈಸುತ್ತ ಬಂದಿದ್ದೇವೆ. ಆದರಿಂದ ಈಗ ಕೆಲವು ದಿವಸಗಳು ಹೇಗೋ ಸುಧಾರಿಸಿಕೊಂಡು ಬಂದಿದ್ದೇವೆ. ಇನ್ನು ಮೇಲಾದರೂ ನಮ್ಮ ಮನಸ್ಸನ್ನು ಪೂರಾ ಕಲುಷಿತವಾಗದ ರೀತಿಯಲ್ಲಿ ನೋಡಿಕೊಂಡು ಹೋಗಿ ಎಂದು ಹೇಳು ತ್ತೇನೆ. ಆರು ಗಂಟೆ ಟೈಂ ಫಿಕ್ಸ್ ಮಾಡಿದ್ದೇವೆ. ಬೆಳಗಿನಿಂದ ಮುಂಜಾನೆವರೆಗೆ ಕೇಳಿದರೂ ಏಷ್ಟೆ ; ನಾವು ಕೇಳಿದ ವಿಷಯಗಳಿಗೆ ಜವಾಬು ಬರುವುದಿಲ್ಲ. ಇದನ್ನು ಅನೇಕ ಸಾರಿ ಹೇಳಿದ್ದೇನೆ. ಈ ದೃಷ್ಟಿಯಿಂದ ತಾವು ಈ ಸಭೆಯಲ್ಲಿ ಏನೋ ಈ ಕಡೆ ಇರುವವರು ನಮ್ಮ ಕಣ್ಣಿನಲ್ಲಿ ಇವ್ವಾರೆ ಎನ್ನುವ ಭಾವನೆ ಬಂದಿದೆ ಎಂದು ನಮ್ಮ ಸ್ನೇಹಿತರು ಹೇಳುತ್ತಾರೆ. ಅವರು ಹೇಳಿರುವ ರೀತಿಯಲ್ಲಿ ಈಕಡೆ ಅಭಿಪ್ರಾಯವಿದೆ. ಆ ರೀತಿ ಅವಕಾಶ ಕೊಡಬಾರದು ಎಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಪುಟ್ಟಸ್ವಾಮಿ.—ನ್ಯೂಭಾವತಃ ನಾನು ಗರಾಚೆ ಮನುಷ್ಯನಲ್ಲ. ಈ ಹೊತ್ತು ನನಗೂ ಸ್ವಲ್ಪ ಬೇಜಾರಾಯಿತು. ಎಲ್ಲ ಕ್ವಾರಿಫಿಕೇಷನ್ನುಗಳಿಗೂ ಮಂತ್ರಿಗಳು ಉತ್ತರ ಕೊಟ್ಟು, ಕೊನೆಯಲ್ಲಿ ಪ್ರಶ್ನೆ ಕೇಳಿದಂಥ ನನ್ನ ಕ್ವಾರಿಫಿಕೇಷನ್ನಿಗೆ ಉತ್ತರ ಕೊಡುವ ಸಂದರ್ಭದಲ್ಲಿ, ತಾವು ಎಮ್ಮೆ ಓಟಿಗೆ ಹಾಕುತ್ತೇನೆಂದು ಹೇಳಿದಿರಿ. ಪ್ರೊಸೀಡಿಂಗ್ಸ್ ತೆಗೆದು ನೋಡಿದರೆ ಗೊತ್ತಾಗುತ್ತದೆ. ನನ್ನ ಕ್ವಾರಿಫಿಕೇಷನ್‌ಗಳಿಗೆ ಉತ್ತರ ಕೊಟ್ಟಿಲ್ಲ. ಶ್ರೀ ಪುಟ್ಟಸ್ವಾಮಿಯವರು ಏನು ಹೇಳಿದ್ದಾರೆ ಅದನ್ನು ನಾನು ಸಬ್‌ಸ್ಟಾನ್ಷಿಯೇಟ್ ಮಾಡುತ್ತೇನೆ ಎಂದು ಮಾತ್ರ ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಬೆಳಿಗ್ಗೆ ಹೆಚ್ಚು ಕಾಲ ನಾನು ಸಭೆಯಲ್ಲಿ ಇರಲಿಲ್ಲ. ಪಾರ್ಲಮೆಂಟರಿ ಚೌಕಟ್ಟಿನೊಳಗೆ ಕೆಲಸ ಮಾಡುವಂಥ ಒಂದು ಒಪ್ಪಂದಕ್ಕೆ ಒಡಂಬಡಿಸಿ, ಆಯಾ ಪಕ್ಷಗಳ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಇಷ್ಟು ಕಾಲ ಕೊಡಬಹುದು ಎನ್ನುವ ಕಾಲ ಮಿತಿ ಯನ್ನು ವಿಭಾಗ ಮಾಡಿ ಹಂಚುವಂಥ ಒಪ್ಪಂದಕ್ಕೆ ತಾವು ನಮ್ಮನ್ನು ಬದ್ಧರನ್ನಾಗಿ ಮಾಡಿದ್ದೀರಿ. ಇಷ್ಟು ಒಪ್ಪಂದಕ್ಕೆ ಬಂದಿದ್ದರೂ ಕೂಡ ಈ ಹೊತ್ತು ಸಂಯುಕ್ತ ವಿಧಾಯಕ ದಳಕ್ಕೆ ಎಷ್ಟು ಕಾಲ ಅಬ್ಸೋಕೇಷನ್ ಆಗಿ ಬರಬೇಕಾಗಿತ್ತೋ ಅದನ್ನು ಕೂಡ ರೆಕ್ಕೆ ಮಾಡಿದೆ. ನಮ್ಮ ಕಡೆಯ ಸದಸ್ಯರು ಕೇವಲ ಮೂರು ಜನ ಮಾತ್ರ 30-35 ನಿಮಿಷ ಮಾತನಾಡಿದ್ದಾರೆ. 50 ನಿಮಿಷ ಕಾಲ ಮಾತ ನಾಡಲು ಅವಕಾಶವಾಗುವಂತೆ ಕೊಟ್ಟ ಪಟ್ಟಿಯನ್ನೂ ಕೂಡ ಕಾರ್ಯಗತ ಮಾಡಿದೆ ಇದ್ದುದರಿಂದ ಒಬ್ಬಿಬ್ಬರು ಸದಸ್ಯರು ಈ ಹೊತ್ತು ಈ ಶಾಸನ ಸಭೆಗೆ ಏಕೆ ಬರಬೇಕು ಎಂದು ಮನಸ್ಸಿಗೆ ಹಚ್ಚಿ ಕೊಂಡು ರಾಜೀನಾಮೆ ಕೊಡಬೇಕು ಎನ್ನುವ ಮಟ್ಟಕ್ಕೆ ಹೋಗಿದ್ದಾರೆ. ಕಾನೂನಿನ ಚೌಕಟ್ಟಿ ನೊಳಗೆ ಕೆಲಸ ಮಾಡಲು ಕಾಲವನ್ನು ಹಂಚುತ್ತೀರಿ ಎಂದು ಹೇಳುತ್ತೀರಿ. ಹಾಗೆ ಹಂಚಿರುವ ಕಾಲವನ್ನೂ ನಮಗೆ ಕೊಡದೆ ಇದ್ದುದರಿಂದ ನಮ್ಮ ಸದಸ್ಯರು ಬೇಜಾರಾಗಿ ಹೋಗಿದ್ದಾರೆ. ಹೀಗಿರುವುದರಿಂದ ನಾವು ಶಾಸನ ಸಭೆಗೆ ಏಕೆ ಬರಬೇಕು ಎನ್ನುವ ಕಾರಣ ಇದೆ. ಈ ರೀತಿ ತಾವು ಮಾಡಿಕೊಂಡು ಹೋದರೆ ಶಾಸನ ಸಭೆಗೆ ಬರುವುದು ಏಕೆ, ಮಾತನಾಡುವುದು ಏಕೆ, ಎನ್ನುವ ಮಟ್ಟಕ್ಕೆ ಹೋದರೆ ಪ್ರಜಾಪ್ರಭುತ್ವಕ್ಕೆ ಕೊಡಲ ಪೆಟ್ಟು ಹಾಕುವ ಮಟ್ಟಕ್ಕೆ ಹೋದಂತಾಗುತ್ತದೆ. ಮತ್ತು ಪ್ರಜಾಪ್ರಭುತ್ವವನ್ನು ಅವಹೇಳನ ಮಾಡಿದಂತಾಗುತ್ತದೆ. ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಅವಹೇಳನವಾದರೆ, ಅದನ್ನು ಪುನಃ ಕಟ್ಟುವುದಕ್ಕೆ ಸಾಧ್ಯವಿಲ್ಲ. ಪ್ರಜಾಪ್ರಭುತ್ವದ ಬುಡಕ್ಕೆ ಕೊಡಲಿ ಪೆಟ್ಟು ಹಾಕುವ ಮಟ್ಟಕ್ಕೆ ಹೋಗುವ ರೀತಿಯಲ್ಲಿ ಮಾಡುವುದಾದರೆ, ಶಿಸ್ತಿಗೆ ಒಳಪಟ್ಟು ಸಭೆಯಲ್ಲಿ ಗೌರವ, ಘನತೆಯನ್ನು ಕಾಪಾಡಿಕೊಂಡು ಹೋಗಬೇಕೆಂಬ ದೃಷ್ಟಿಯಿಂದ ನಿಮ್ಮ ಆಜ್ಞೆಗೆ ತಲೆ ಬಾಗಿದರೂ ಕೂಡ ತಾವು ಈ ರೀತಿ ಮಾಡುವುದಾದರೆ, ಸಹನೆಗೂ ಒಂದು ಮಿತಿ ಇದೆ. ಅದನ್ನು ಮೀರಿದರೆ ಶಾಸನ ಸಭೆಯನ್ನು ನಡೆಸುವುದಕ್ಕೆ ಆಗುವುದಿಲ್ಲ. ಆ ಮಟ್ಟಕ್ಕೆ ಹೋಗದೆ, ಮುಂದುವರಿಯಬೇಕು ಎಂದು ಹೇಳುತ್ತೇನೆ.

ಶ್ರೀ ಆರ್. ದಯಾನಂದ ಸಾಗರ್ (ಚಾಮರಾಜಪೇಟೆ).—ತಾವು ಪ್ರಜಾಪ್ರಭುತ್ವದ ಪ್ರತೀಕ. ತಮ್ಮ ಅಧ್ಯಕ್ಷತೆಯಲ್ಲಿ ನ್ಯಾಯ ಸಿಕ್ಕಬೇಕು, ಧರ್ಮ ಸಿಕ್ಕಬೇಕು. ಅನೇಕ ಬೇಡಿಕೆಗಳು ನಮ್ಮ ಮುಂದೆ ಬರುತ್ತಿವೆ. ಕೋಟ್ಯಾಂತರ ರೂಪಾಯಿಗಳ ಬೇಡಿಕೆಯನ್ನು ಸರ್ಕಾರ ನಮ್ಮ ಮುಂದೆ ಇಟ್ಟು, ಆ ಬೇಡಿಕೆಗಳ ಪರ ಮತ್ತು ವಿರೋಧವಾಗಿ ಸಮಗ್ರವಾದ ಚರ್ಚೆ ನಡೆಯಬೇಕು. ನಮ್ಮ ಪಕ್ಷಕ್ಕೆ ಈ ಬೆಳಿಗ್ಗೆ 40 ನಿಮಿಷ ಕೊಟ್ಟಿರಿ, 40 ನಿಮಿಷದಲ್ಲಿ ಎಷ್ಟು ಮಂದಿ ಆ ವಿಷಯದ ಮೇಲೆ ಚರ್ಚೆ ಮಾಡಬಹುದು! ಹೇಗೆ ವಿಷಯಗಳನ್ನು ಮಥನ ಮಾಡಬಹುದು? ಇದು ನ್ಯಾಯವೇ? ನಾವು ತಮಗೆ ಮೊದಲೇ ನಿವೇದನೆ ಮಾಡಿಕೊಂಡೆವು, ವೋಟ್ ಆನ್ ಅಕೌಂಟ್ ತೆಗೆದುಕೊಳ್ಳಿ, ಒಂದೊಂದು ಡಿಮ್ಯಾಂಡಿಗೂ ಎರಡು ದಿವಸ, ಮೂರು ದಿವಸ, ನಾಲ್ಕು ದಿವಸ, ಹೀಗೆ ಎಷ್ಟೆಷ್ಟು ಸಮಯ ಬೇಕೋ ಅಷ್ಟು ಸಮಯವನ್ನು ಚರ್ಚೆ ಮಾಡುವುದಕ್ಕೆ ಕೊಡಿ. ಈ ಸಭೆಗೆ ಸದಸ್ಯರು ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಬರುತ್ತಾರೆಯೇ ಹೊರತು ಟಿ. ಎ ಮತ್ತು ಡಿ. ಎ. ತೆಗೆದು ಕೊಂಡು ಹೋಗುವುದಕ್ಕೆ ಬರುವುದಿಲ್ಲ. ಪ್ರಜಾಪ್ರಭುತ್ವದ ಮೂಲತತ್ವಗಳನ್ನು ತಮಗೆ ಹೇಳಿಕೊಡ ಬೇಕಾಗಿಲ್ಲ. ಆರೋಗ್ಯ ಇಲಾಖೆಯ ಬೇಡಿಕೆಗಳನ್ನು ಅರ್ಧ ದಿವಸದಲ್ಲಿ ಚರ್ಚೆ ಮಾಡಿ ಮುಗಿಸಿ ವೋಟಿಗೆ ಹಾಕಿದರೆ ಪ್ರಜಾಪ್ರಭುತ್ವ ಎಷ್ಟರಮಟ್ಟಿಗೆ ಇಲ್ಲಿ ಉಳಿದಿದೆ ಎನ್ನುವುದನ್ನು ಯೋಚನೆ ಮಾಡ ಬೇಕು, ಇದನ್ನೆಲ್ಲ ಸಮಗ್ರವಾಗಿ ಯೋಚನೆ ಮಾಡಿ ತಾವು ಒಂದು ಸೆಲ್ಯೂಷನ್ ಕಂಡು ಹಿಡಿಯ ಬೇ ದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Speaker's Ruling on a subject *re :* Selecting Departments on Discussion of the Demands for Grants.

MR. SPEAKER.— Hon. Members have raised several points. I shall be brief in clarifying the position. Hon. Member Sri Dayananda Sagar and Sri Siddaveerappa raised a point whether it would not have been better to pass vote on account instead of Demands for Grants. That is not a matter left to the discretion of the Speaker. It is for the Government and the Opposition to consider and decide. Sri Siddaveerappa has been a Member of the Legislature for a long time and was also a Minister and he should therefore know that it is not for the Speaker to decide whether vote on account should be taken or not. I request the hon. Members to point out any provisions under the Constitution or the Rules of Procedure under which I can give such a direction to the Government. It is really beyond my power to give such direction. Even before the discussion on the Demands for Grants began in this House, Sri Siddaveerappa, Sri Sivappa, Sri Srikantaiah and Sri Sharan Gowda and many other Members of the Opposition wanted to have a vote on account but then the Treasury Benches were not agreeable to the proposal. Then I pointed out that there were 52 demands and if one day were to be allotted for each demand, then the number of days required for discussing all the Demands would be 52. The practice followed in the undivided Bombay State where I had the honour of being a member, and also even in the Lok Sabha could be adopted here. I brought this to the notice of hon. Members. The practice there is to select a few Departments for discussion. This Selection will be done by themembers of the Opposition. This is the case even in England. In England there are about 29 Supply Days. The opposition selects a few Departments which they want to highlight and they divide the number of Supply Days between